# ರಹಸ್ಯಶಾಖೆಯ ಕಾರ್ಯ ನಿರ್ವಹಣೆ

ರಹಸ್ಯ ಶಾಖೆಯಲ್ಲಿ ಆಯೋಗವು ನಡೆಸುವ ವಿವಿಧ ನೇಮಕಾತಿಗಳ ಸ್ಪರ್ಧಾತ್ಮಕ ಪರೀಕ್ಷೆಗಳ ಮತ್ತು ಇಲಾಖಾ ಪರೀಕ್ಷೆಗಳ ಪರೀಕ್ಷೋತ್ತರ ಕಾರ್ಯಗಳನ್ನು ಈ ಕೆಳಕಂಡಂತೆ ನಿರ್ವಹಿಸಲಾಗುತ್ತದೆ.

1. ಸ್ಪರ್ಧಾತ್ಮಕ ಪರೀಕ್ಷೆಗಳು
2. ಇಲಾಖಾ ಪರೀಕ್ಷೆಗಳು
3. ವಿವಿಧ ನೇಮಕಾತಿ ಅಭ್ಯರ್ಥಿಗಳಿಗೆ ಕನ್ನಡ ಪರೀಕ್ಷೆಗಳು

## ಸ್ಪರ್ಧಾತ್ಮಕ ಪರೀಕ್ಷೆಗಳು

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎರಡು ವಿಧಾನಗಳಲ್ಲಿ ನಡೆಸಲಾಗುತ್ತದೆ.

1. ವಸ್ತು ನಿಷ್ಠೆ ಬಹು ಆಯ್ಕೆ ವಿಧಾನ
2. ವಿವರಣಾತ್ಮಕ ವಿಧಾನ

(ಅ) **ವಸ್ತು ನಿಷ್ಠೆ ಬಹು ಆಯ್ಕೆ ವಿಧಾನ ಪರೀಕ್ಷೆಗಳು**: ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಪರೀಕ್ಷೆಗಳನ್ನು ವಸ್ತು ನಿಷ್ಠೆ ಬಹು ಆಯ್ಕೆ ವಿಧಾನದಂತೆ ನಡೆಸಲಾಗುತ್ತಿದೆ. ಈ ವಿಧಾನದಲ್ಲಿ ನಡೆಸುವ ಪರೀಕ್ಷೆಗಳಿಗೆ ಓ.ಎಂ.ಆರ್. ಉತ್ತರಹಾಳೆಗಳನ್ನು ನೀಡಲಾಗುವುದು. ಅಭ್ಯರ್ಥಿಗಳು ಉತ್ತರಿಸಿದ ಓ.ಎಂ.ಆರ್. ಉತ್ತರಹಾಳೆಗಳನ್ನು ಸ್ಕ್ಯಾನಿಂಗ್ ಮಾಡುವ ಮೂಲಕ ಮೌಲ್ಯಮಾಪನ ಮಾಡಿಸಿ ಅಭ್ಯರ್ಥಿಗಳು ಪಡೆದಿರುವ ಅಂಕಗಳನ್ನು ಪ್ರಕಟಿಸಲಾಗುವುದು.

(ಆ) **ವಿವರಣಾತ್ಮಕ ವಿಧಾನದ ಪರೀಕ್ಷೆಗಳು:** ಈ ರೀತಿಯ ಪರೀಕ್ಷೆಗಳಲ್ಲಿ ಉತ್ತರಿಸಲು ಅಭ್ಯರ್ಥಿಗಳಿಗೆ ಉತ್ತರಪುಸ್ತಿಕೆಗಳನ್ನು ನೀಡಲಾಗುತ್ತದೆ. ಈ ಉತ್ತರ ಪುಸ್ತಿಕೆಗಳನ್ನು ಸಂಬಂಧಪಟ್ಟ ವಿಷಯಗಳ ಉಪಾಧ್ಯಾಯರು/ಉಪನ್ಯಾಸಕರು/ಪ್ರಾಧ್ಯಾಪಕರುಗಳಿಂದ ಮೌಲ್ಯಮಾಪನ ಮಾಡಿಸಲಾಗುತ್ತದೆ.

ಗೆಜೆಟೆಡ್ ಪ್ರೊಬೇಷನರ್ಸ್, ಪ್ರೌಢಶಾಲಾ ಮುಖ್ಯ ಶಿಕ್ಷಕರು ಇತ್ಯಾದಿ ಬಹು ಮುಖ್ಯ ನೇಮಕಾತಿಗಳ ಪರೀಕ್ಷೆಗಳಲ್ಲಿನ ಉತ್ತರ ಪತ್ರಿಕೆಗಳನ್ನು ಕಡ್ಡಾಯವಾಗಿ ಬೇರೆಬೇರೆ ಮೌಲ್ಯಮಾಪಕರುಗಳಿಂದ ದ್ವಿ–ಮೌಲ್ಯಮಾಪನ ಮಾಡಿಸಲಾಗುತ್ತದೆ. ಸದರಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕಾಗಿ ಕನಿಷ್ಠ ಹತ್ತು ವರ್ಷಗಳು ಮತ್ತು ಹೆಚ್ಚಿನ ಸೇವೆ ಸಲ್ಲಿಸಿರುವ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು, ಪದವಿ ಕಾಲೇಜುಗಳ ಪ್ರಾಧ್ಯಾಪಕರು ಹಾಗೂ ವಿಷಯ ತಜ್ಞರ ಸೇವೆಯನ್ನು ಪಡೆಯಲಾಗುತ್ತದೆ. ಪ್ರತಿ ವಿಷಯದ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಪ್ರತಿ ಐವರು ಪರೀಕ್ಷಕರಿಗೆ ಒಬ್ಬರಂತೆ ಸೇವಾ ಜ್ಯೇಷ್ಠತೆಯ ಆಧಾರದ ಮೇರೆಗೆ ಪರಿಶೀಲಕರನ್ನು ನೇಮಕಮಾಡಲಾಗುತ್ತದೆ.

ಮೌಲ್ಯಮಾಪನ ಆರಂಭಕ್ಕೆ ಮುನ್ನ ಎಲ್ಲಾ ಪರೀಕ್ಷಕರುಗಳಿಗೆ ಮೌಲ್ಯಮಾಪನ ಸಂಬಂಧವಾಗಿ ಅನುಸರಿಸಬೇಕಾಗುವ ಸೂಚನೆಗಳು ಮತ್ತು ಮಾದರಿ ಉತ್ತರಗಳನ್ನು ನೀಡಲಾಗುತ್ತದೆ. ಇವುಗಳನ್ನು ಗಮನಿಸಿಕೊಂಡ ತರುವಾಯ ಮಾದರಿ ಉತ್ತರಗಳಲ್ಲಿ ಅವರುಗಳಿಗೆ ಏನಾದರೂ ಗೊಂದಲವಿದ್ದಲ್ಲಿ ಎಲ್ಲರೂ ಸೇರಿ ಚರ್ಚಿಸಿ ಅವಶ್ಯವಿದ್ದಲ್ಲಿ ಮಾದರಿ ಉತ್ತರಗಳನ್ನು ಸರಿಪಡಿಸಿಕೊಂಡು ಮೌಲ್ಯಮಾಪನವನ್ನು ಆರಂಭಿಸಲಾಗುತ್ತದೆ. ಮೊದಲು ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಗಳನ್ನು ಕಡ್ಡಾಯವಾಗಿ ಪರಿಶೀಲಕರಿಗೆ ತೋರಿಸಿ ಅವರ

ಮಾರ್ಗದರ್ಶನ/ಸಲಹೆಗಳ ಮೇರೆಗೆ ಮೌಲ್ಯಮಾಪನವನ್ನು ಮುಂದುವರೆಸುತ್ತಾರೆ. ಪೂರ್ವಾಹ್ನ 20 ಮತ್ತು ಅಪರಾಹ್ನ 10 ಉತ್ತರಪತ್ರಿಕೆಗಳಂತೆ ದಿನವೊಂದಕ್ಕೆ 30 ಉತ್ತರಪತ್ರಿಕೆಗಳನ್ನು ಮೌಲ್ಯಮಾಪನಕ್ಕಾಗಿ ನೀಡಲಾಗುತ್ತದೆ. 10 ಉತ್ತರಪತ್ರಿಕೆಗಳಿರುವ ಒಂದು ಪ್ಯಾಕೆಟನ್ನು ಮೌಲ್ಯಮಾಪನ ಮಾಡಿದ ತರುವಾಯ ಅದನ್ನು ಪರಿಶೀಲನೆಗಾಗಿ ಪರಿಶೀಲಕರಿಗೆ ನೀಡುತ್ತಾರೆ. ಪರಿಶೀಲಕರು ಉತ್ತರಪತ್ರಿಕೆಗಳನ್ನು ರ್‍ಯಾಂಡಮ್ ಆಗಿ ಪರಿಶೀಲಿಸಿ ಮೌಲ್ಯಮಾಪಕರಿಗೆ ಅವಶ್ಯವಿದ್ದಲ್ಲಿ ಮೌಲ್ಯಮಾಪನದ ಸಂಬಂಧ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಾರೆ. ಇದು ಸಾಮಾನ್ಯವಾಗಿ ಎಲ್ಲಾ ವಿಷಯಗಳ ಉತ್ತರಪತ್ರಿಕೆಗಳ ಮೌಲ್ಯಮಾಪನ ಮಾಡುವಾಗ ಅನುಸರಿಸುತ್ತಿರುವ ವಿಧಾನವಾಗಿದೆ.

ಕಡ್ಡಾಯ ಕನ್ನಡ ಮತ್ತು ಕಡ್ಡಾಯ ಆಂಗ್ಲ ಪತ್ರಿಕೆಯ ಉತ್ತರ ಪತ್ರಿಕೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಪತ್ರಿಕೆಗಳ ಉತ್ತರ ಪತ್ರಿಕೆಗಳನ್ನು ಕಡ್ಡಾಯವಾಗಿ ಬೇರೆ-ಬೇರೆ ಪರೀಕ್ಷಕರುಗಳಿಂದ ಎರಡು ಬಾರಿ ಮೌಲ್ಯಮಾಪನ ಮಾಡಿಸಲಾಗುತ್ತದೆ. ಈ ಎರಡು ಮೌಲ್ಯಮಾಪನಗಳ ಒಟ್ಟು ಅಂಕಗಳ ಸರಾಸರಿ ಅಂಕಗಳನ್ನು ಅಭ್ಯರ್ಥಿ ಆ ಪತ್ರಿಕೆಯಲ್ಲಿ ಪಡೆದ ಅಂಕಗಳೆಂದು ಪರಿಗಣಿಸಲಾಗುತ್ತದೆ. ಈ ಎರಡೂ ಮೌಲ್ಯಮಾಪನಗಳ ಒಟ್ಟು ಅಂಕಗಳ ವ್ಯತ್ಯಾಸ ಶೇ. 15 ಮತ್ತು ಅದಕ್ಕಿಂತ ಹೆಚ್ಚಾಗಿದ್ದ ಪಕ್ಷದಲ್ಲಿ ಮತ್ತೊಬ್ಬ ಪರೀಕ್ಷಕರಿಂದ ಮೂರನೇ ಮೌಲ್ಯಮಾಪನ ಮಾಡಿಸಲಾಗುತ್ತದೆ. ಈ ಮೂರು ಮೌಲ್ಯಮಾಪನಗಳ ಒಟ್ಟು ಅಂಕಗಳಲ್ಲಿ ಕಡಿಮೆ ಅಂಕಗಳ ಅಂತರದ ವ್ಯತ್ಯಾಸವಿರುವ ಎರಡು ಮೌಲ್ಯಮಾಪನಗಳ ಒಟ್ಟು ಅಂಕಗಳ ಸರಾಸರಿ ಅಂಕಗಳನ್ನು ಅಭ್ಯರ್ಥಿ ಆ ಪತ್ರಿಕೆಯಲ್ಲಿ ಪಡೆದಿರುವ ಅಂಕಗಳೆಂದು ಪರಿಗಣಿಸಿ ಫಲಿತಾಂಶವನ್ನು ಪ್ರಕಟಿಸಲಾಗುತ್ತದೆ.

## ಇಲಾಖಾ ಪರೀಕ್ಷೆಗಳು

ರಾಜ್ಯ ಸರ್ಕಾರಿ ನೌಕರರುಗಳಿಗೆ ವಾರ್ಷಿಕ ಎರಡು ಅಧಿವೇಶನಗಳಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತಿದ್ದು, ಒಟ್ಟು 67 ವಿಷಯಗಳ 113 ಪತ್ರಿಕೆಗಳಿರುತ್ತವೆ. ಪತ್ರಲೇಖನ, ಪ್ರಬಂಧ, ಸಂಕ್ಷಿಪ್ತಗೊಳಿಸುವುದು ಇತ್ಯಾದಿ ಅಂಶಗಳಿರುವ ಕೆಲವು ಪತ್ರಿಕೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಪತ್ರಿಕೆಗಳ ಪರೀಕ್ಷೆಗಳನ್ನು ವಸ್ತು ನಿಷ್ಠ ಬಹು ಆಯ್ಕೆ ವಿಧಾನದಲ್ಲಿ ನಡೆಸಲಾಗುತ್ತದೆ.

## ವಿವಿಧ ನೇರ ನೇಮಕಾತಿ ಅಭ್ಯರ್ಥಿಗಳಿಗೆ ಕಡ್ಡಾಯ ಕನ್ನಡ ಪರೀಕ್ಷೆಗಳು

ವಿವಿಧ ನೇರ ನೇಮಕಾತಿ ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸಿದ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಹಾಗೂ ದ್ವಿತೀಯ ಭಾಷೆಯಾಗಿ ಅಭ್ಯಸಿಸದಿರುವ ಅಭ್ಯರ್ಥಿಗಳಿಗೆ ಈ ಪರೀಕ್ಷೆಯನ್ನು ನಡೆಸಲಾಗುತ್ತಿದ್ದು, ಸದರಿ ಪರೀಕ್ಷೆಯ ಪತ್ರಿಕೆಗೆ ಒಟ್ಟು 150 ಅಂಕಗಳನ್ನು ನಿಗದಿ ಪಡಿಸಿದ್ದು, ಇದರಲ್ಲಿ 50 ಮತ್ತು ಹೆಚ್ಚಿನ ಅಂಕಗಳನ್ನು ಪಡೆದ ಅಭ್ಯರ್ಥಿಗಳು ಅರ್ಹತೆ ಪಡೆಯುತ್ತಾರೆ.

ಈ ಮೇಲಿನ ಕೆಲಸ ಕಾರ್ಯಗಳೊಂದಿಗೆ ಮಾನ್ಯ ಕಾರ್ಯದರ್ಶಿಯವರ ಸೂಚನೆಯಂತೆ ಇತರೆ ಕೆಲಸ ಕಾರ್ಯಗಳನ್ನು ಸಹ ನಿರ್ವಹಿಸಲಾಗುತ್ತದೆ. ಮೇಲಿನಂತೆ ಕ್ರಮಕ್ಕೈಗೊಳ್ಳುವ ಸಲುವಾಗಿ ಯಾವುದೇ ನಿಯಮಗಳು ಇರುವುದಿಲ್ಲ. ಆದರೆ ಈ ಬಗ್ಗೆ ಮಾನ್ಯ ಆಯೋಗ ಮತ್ತು ಮಾನ್ಯ ಕಾರ್ಯದರ್ಶಿಯವರು ನೀಡುವ ಸೂಚನೆಗಳಂತೆ ಕ್ರಮಕ್ಕೈಗೊಳ್ಳಲಾಗುತ್ತದೆ.

Section Officer
K.P.S.C. Bangalore

# Working Procedure of RHS Branch

The post examination work is carried in the RHS branch for various recruitments conducted by the Commission through competitive examinations and departmental examination, as follows:

1. Competitive examinations
2. Departmental examinations
3. Kannada examination to the candidates for various recruitments.

## Competitive Examinations

There are two types in Competitive Examination

1. Objective multiple choice examination
2. Descriptive type examination.

1. **Objective multiple choice type examination**

   Most of the examinations conducted these days are of multiple choice types. OMR sheets are provided for these kinds of examinations. The answered OMRs are then evaluated through scanning and the results are announced later accordingly.

2. **Descriptive type examinations**:

   The candidates are given answer booklets for these kind of examinations. These answer booklets are then evaluated by concerned subject Teachers/Lecturers/Professors.

   Examinations like Gazetted Probationers, High School Head Master etc.& the other important recruitmental exam answer papers are double evaluated by different valuators from various Universities/Degree colleges having a minimum of 10 years experience. For every five valuators one scrutiniser will be appointed to guide the valuators.

   The instructions and the model answers to be followed during central valuation are given to all the examiners prior to start of valuation, for their discussion and finalisation. Post-valuation, Scrutinisers go through the answerbooks to verify the adherence of the guidelines by the valuators.

   Except Compulsory Kannada and Compulsory English subject papers all the other subject answer books are compulsorily evaluated twice by different evaluators. The average marks of these two valuations are announced as actual marks of that particular candidate. If the difference in these two

valuations is 15% (+ or -) or more, third valuation is done. In case of three valuation, the average of the nearest two marks will be considered as the marks scored by the candidate.

**3. Departmental Examination.**

State Govt., employees write the Service examinations in two sessions annually, containing of 113 papers on 67 different subjects.

All the examinations are of multiple choice type except letter writing, Essay writing & Summary writing paper.

**4. Compulsory Kannada examination for candidates of various recruitments**

This examination is conducted for the candidates who have not studied Kannada either as a First or Second Language in their studies.

In this examination, Candidates scoring a minimum of marks 50 (for a Max. of 150 marks) are considered to have passed the examination.

* * *

M. Annapurna
Section Officer
K.P.S.C. Bangalore